ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ/ಸುತ್ತೋಲೆ/ಸ.ಪ್ರ.ದ.ಕಾ/ಆಯವ್ಯಯ/04/2023-24. ಕಾಲೇಜುಶಿಕ್ಷಣ ಆಯುಕ್ತರ ಕಛೇರಿ,

ಬೆಂಗಳೂರು,ದಿನಾಂಕ:೦6.05.2023.

ಇವರಿಗೆ,

ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

ವಿಷಯ: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 2023-24ನೇ ಸಾಲಿನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳ ಕೊರತೆಯಾಗಿರುವ ಗೌರವಧನಕ್ಕಾಗಿ ಮಾಹಿತಿಯನ್ನು ಸಲ್ಲಿಸುವ ಕುರಿತು.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ:ಇಡಿ/18ಡಿಸಿಇ2023, ದಿನಾಂಕ:27.01.2023.
2.ಪತ್ರ ಸಂಖ್ಯೆ: ಕಾಶಿಇ/ನೇವಿ-1/ಅಉಆ/315/2022-23, ದಿನಾಂಕ:28.01.2023.
3.ಈ ಕಛೇರಿಯ ಅನುದಾನದ ಬಿಡುಗಡೆಯ ಆದೇಶದ ಸಂಖ್ಯೆ: ಕಾಶಿಇ/ ಆಯವ್ಯಯ /ಅ.ಉ.ಗೌ/ಅ.ಬಿ/04/2023-24,ದಿನಾಂಕ:25.04.2023.

* * * * * * *

ಪ್ರಸ್ತಾಪಿತ ವಿಷಯ ಹಾಗೂ ಉಲ್ಲೇಖ-1&2ಕ್ಕೆ ಸಂಬಂಧಿಸಿದಂತೆ ಕಾಲೇಜು ಇಲಾಖಾ ವ್ಯಾಪ್ತಿಯಡಿಲ್ಲ ಬರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 2022-23ನೇ ಸಾಲಿನಲ್ಲಿ ಹೆಚ್ಚುವರಿ ಕಾರ್ಯಭಾರಕ್ಕೆ ನೇಮಕಗೊಂಡು 2023-24ನೇ ಸಾಲಿನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳಿಗೆ ಈಗಾಗಲೇ ಮಾರ್ಚ್-2023 ಮತ್ತು ಏಪ್ರಿಲ್-2023ರ ಮಾಹೆಗಳಿಗೆ ಉಲ್ಲೇಖಿತ ಪತ್ರ ಸಂಖ್ಯೆ-3ರಂದು ಗೌರವಧನವನ್ನು ಪಾವತಿಸಲು ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ. ಸದರಿ ಅನುದಾನದಲ್ಲಿ ಗೌರವಧನವನ್ನು ಪಾವತಿಸಲು ಕೊರತೆಯಾಗಿದ್ದಲ್ಲಿ ಗೌರವಧನದ ಮಾಹಿತಿಯೊಂದಿಗೆ ಮಾರ್ಚ್-2023 ಮತ್ತು ಏಪ್ರಿಲ್-2023ರ ಮಾಹೆಯ ಇ.ಎಂ.ಐ.ಎಸ್ ಪಟ್ಟಿ ಮತ್ತು ಪ್ರಾದೇಶಿಕ ನಿರ್ದೇಶಕರುಗಳಿಂದ ಪಡೆದಿರುವ ಅನುಮೋದನೆಯ ಪಟ್ಟಿ ಹಾಗೂ ಅತಿಥಿ ಉಪನ್ಯಾಸಕರುಗಳ ಹಾಜರಾತಿವಹಿಯ ಜೆರಾಕ್ಷ ಪ್ರತಿಯನ್ನು ಗೂಗಲ್ ಫಾರಂನಲ್ಲಿ ಆಪ್‌ಲೋಡ್ ಮಾಡಲು ಹಾಗೂ ಇ-ಮೇಲ್ ವಿಳಾಸ dcegfbudget@gmail.com ಕ್ಕೆ ಎಕ್ಸೆಲ್ ಫಾರ್ಮೆಟ್‌ನಲ್ಲಿ ದಿನಾಂಕ:13.05.2023ರೊಳಗೆ ಕಳುಹಿಸಿಕೊಡಲು ಹಾಗೂ ಗೂಗಲ್‌ಫಾರಂನಲ್ಲಿ ದೃಢೀಕರಿಸಿದ ಜೆರಾಕ್ಸ್ ಪ್ರತಿಯನ್ನು ಆಪ್‌ಲೋಡ್ ಮಾಡಲು ಸೂಚಿಸಲಾಗಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು

ಪ್ರತಿಯನ್ನು:

1. ಮಾಹಿತಿ ಅಧಿಕಾರಿಗಳು, ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗ,ಕೇಂದ್ರಕಛೇರಿ ವಿಭಾಗ,ಬೆಂಗಳೂರು- ಸದರಿ ಆದೇಶವನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು ಸೂಕ್ತಕ್ರಮಕ್ಕಾಗಿ.
2. ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ ಮತ್ತು ಕಲಬುರ್ಗಿ – ಸೂಕ್ತಕ್ರಮಕ್ಕಾಗಿ
3. ಕಛೇರಿ ಪ್ರತಿ.